ಶ್ರೀ ಜೆ.ಹೆಚ್.ಪಟೇಲ್: ಅವನಿಗೆ ಪ್ರಜ್ಞೆ ಇಲ್ಲ, ಅವನಿಗೆ ಸಾಕಷ್ಟು ಹೊಡೆದಿದ್ದಾರೆ, ಅವನನ್ನು ದೂರ ತೆಗೆದುಕೊಂಡು ಹೋದಾಗ ಸತ್ತು ಹೋಗಿದ್ದರೆ ಕಷ್ಟವಾಗುತ್ತಿತ್ತು. ಈಗ ಜನಜಂಗುಳಿಯಾಗಿದೆ ಹೊಡೆದಿದ್ದಾರೆ, ಅದಕ್ಕೆ ಏನೇ ಕಾರಣಗಳಿರಲಿ, ಏನೇ ಭಾವನೆಗಳಿರಲಿ. ಆದರೆ ಆ ಪೋಲೀಸರ ಕರ್ತವ್ಯವೇನು? ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೇ ಅಥವಾ ಎಲ್ಲಾದರೂ ದೂರವಿಡಬೇಕೇ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೋಗಲಿ ಅಲ್ಲಿ ಪೋಲಿಸ್‌ನವರನ್ನು ರಕ್ಷಣೆಗೆ ಹಾಕಿ ಜನರು ಬಾರದಂತಾದರು ನೋಡಿಕೊಳ್ಳಬೇಕಾಗಿತ್ತು? ಅದನ್ನಾದರೂ ವ್ಯವಸ್ಥೆ ಮಾಡಬೇಕಾಗಿತ್ತು, ಅಲ್ಲಾದರೂ ವಿಫಲರಾದರಲ್ಲ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಏನು ಹೇಳಿದೆ ಎಂದರೆ, ಪರಿಹಾರ ಕೊಡಿ, ಅಲ್ಲಿ ಭಯದ ವಾತಾವರಣವಿದೆ, ಪೋಲೀಸರ ರಕ್ಷಣೆಯನ್ನು ಕೊಡಿ, ತಪ್ಪಿತಸ್ಥನಿದ್ದವನಿಗೆ ಜೈಲಿಗೆ ಕರೆದುಕೊಂಡು ಹೋಗಿ ನೇಣು ಹಾಕಿರಿ ಆದರೆ ಅಮಾಯಕ ಜನರಿಗೆ ರಕ್ಷಣೆ ಕೊಡಿ, ಪರಿಹಾರ ಕೊಡಿ ಮತ್ತು ಆ ಭಯದ ವಾತಾವರಣವನ್ನು ತಪ್ಪಿಸಿ.

ಶ್ರೀ ಆರ್.ರೋಷನ್‌ಬೇಗ್: ಸಭಾಧ್ಯಕ್ಷರೇ, ಆ ಜಿಲ್ಲೆ ಮಂತ್ರಿಗಳು ಅಲ್ಲಿಗೆ ಹೋಗುತ್ತಿದ್ದಾರೆ, ಅಲ್ಲಿ ಪರಿಹಾರ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಕೋಮು ಗಲಭೆಯಾದಾಗ ಯಾವ ರೀತಿಯಾಗಿ ಪರಿಹಾರವನ್ನು ಕೊಡುತ್ತೀರಿ ಅದೇ ರೀತಿ ಇವರಿಗೆ ಪರಿಹಾರ ಕೊಡಿ ಎಂದು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜೆ.ಹೆಚ್.ಪಟೇಲ್: ಏನು ಪರಿಹಾರ ಕೊಡಬೇಕು ಅದನ್ನು ಕೊಡುತ್ತೇವೆ, ಜಿಲ್ಲಾಧಿಕಾರಿಗಳಿಂದ, ಪೋಲೀಸ್ ಅಥಾರಿಟಿಯಿಂದ ವರದಿಯನ್ನು ತರಿಸಿಕೊಳ್ಳಬೇಕು.

ಛೇರ್ಮನ್: ಶ್ರೀ ಕೆ.ಎನ್.ನಾಗೇಗೌಡರು, ಸ್ಟೇಟ್‌ಮೆಂಟ್ ಮಾಡಿ.

(2) ತುಮಕೂರು ಡಿವಿಜನ್ ಹೇಮಾವತಿ ನಾಲಾ ವಲಯದಲ್ಲಿನ ಕಾಮಗಾರಿಗಳಲ್ಲಿ ಹಣದ ದುರಪಯೋಗ

+ ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಮಂತ್ರಿಗಳು): ಮುದ್ದಹನುಮೇಗೌಡರು ಕೇಳಿದಂತೆ ಪ್ರಶ್ನೆಗೆ, ಹೇಮಾವತಿ ನಾಲಾ ವಲಯದಲ್ಲಿ ಕಾಮಗಾರಿಕೆ ಎಂದರೆ, ತುಮಕೂರು ಸೇರಿದಂತೆ ನಾಲ್ಕು ಡಿವಿಷನ್‌ಗಳಲ್ಲಿ, ತುಮಕೂರು ನಾಲಾ ಮತ್ತು ನಾಗಮಂಗಲ ಶಾಖೆ ನಾಲೆಗಳಲ್ಲಿ ಆ ನಾಲೆಗಳಿಗೆ ಹೋಗತಕ್ಕಂಥ ಮರಗಳೇನಿವೆ ಆ ಮರಗಳನ್ನು ಹರಾಜು ಮಾಡದೆ ಸಂಬಂಧಪಟ್ಟ ಇಂಜಿನಿಯರ್‌ಗಳು ಮಾರಿಕೊಂಡಿದ್ದಾರೆನ್ನುವ ಒಂದು ಮಾಹಿತಿಯನ್ನು ಇಟ್ಟುಕೊಂಡು ಲೋಕಾಯುಕ್ತದವರು ದಿನಾಂಕ: ಹದಿನಾರು ಏಳು ಹಾಗೂ ಹದಿಮೂರು ಎಂಟು

ರಂದು ಒಂದು ಕಾಗದವನ್ನು ಬರೆದಿದ್ದಾರೆ. ಅವರು ಹೇಳಿರತಕ್ಕಂಥ ಒಂದು ವಿಚಾರವೆಂದರೆ ಏಪ್ರಿಲ್ 1989ರಿಂದ ಅಕ್ಟೋಬರ್ 1995ರವರೆಗೆ ನಡೆದಿರುವ ಕಾಮಗಾರಿಗಳು ಹಾಗೂ ಜೂನ್ 1989ರಿಂದ 1992ರವರೆಗೆ ನಡೆದಿರುವಂತಹ ಕಾಮಗಾರಿ ಮತ್ತು 1986ರಿಂದ 1994ರವರೆಗೆ ನಡೆದಿರುವಂತಹ ಕಾಮಗಾರಿ ಅವು ತುರುವೇಕೆರೆ, ಹೆಬ್ಬೂರು, ಯಡಿಯೂರು, ಮತ್ತು ತುಮಕೂರು ಈ ನಾಲ್ಕು ಡಿವಿಜನ್‌ಗಳ ಮಾಹಿತಿಯನ್ನು ಕೇಳಿದ್ದಾರೆ. ಅವರು ಈ ನಾಲ್ಕರ ಮಾಹಿತಿಯನ್ನು ಕೇಳಿ ತನಿಖೆಯನ್ನು ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಇಲಾಖೆಯವರು ಭೂ ಸ್ವಾಧೀನ ಮಾಡಬೇಕಾದಂತಹ ಪ್ರದೇಶ ಆರು ಸಾವಿರದ ಆರುನೂರ ಹನ್ನೊಂದು ಎಕರೆಗಳನ್ನು ಸ್ವಾಧೀನ ಮಾಡಿಕೊಂಡಿರುವಂಥಾದ್ದು, ಎರಡು ಸಾವಿರದ ನಾಲ್ಕು ನೂರ ನಲವತ್ತೆರಡು ಎಕರೆಗಳನ್ನು ಸ್ವಾಧೀನ ಮಾಡಿಕೊಂಡಿರುವಂತಹ ಪ್ರದೇಶಗಳಿಗೆ ಪಾವತಿ ಮಾಡಿರುವಂತಹ ಭೂ ಪರಿಹಾರ ಹನ್ನೆರಡು ಕೋಟಿ ಎಂಭತ್ತೆಂಟು ಲಕ್ಷದ ತೊಂಭತ್ತೊಂಭತ್ತು ಸಾವಿರದ ಏಳುನೂರ [illegible] ಇಪ್ಪತ್ತು ರೂಪಾಯಿಗಳು ಈಗ ಅಲ್ಲಿಗೆ [illegible] ಲೋಕಾಯುಕ್ತದವರು ಹೋಗಿದ್ದಾರೆ, ಅವರು ತನಿಖೆ ಮಾಡುತ್ತಿದ್ದಾರೆ. ಲೋಕಾಯುಕ್ತದವರು ನಮ್ಮ ಇಲಾಖೆಗೆ ಕಾಗದವನ್ನು ಬರೆದು ಮಾಹಿತಿಯನ್ನು ಕೇಳಿದ್ದಾರೆ. ಈಗ ಅವರು ಎಲ್ಲಾ ಮಾಹಿತಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈಗ ನನ್ನ ಹತ್ತಿರ ಮಾಹಿತಿ ಇರುವಂಥಾದ್ದು ಇಷ್ಟೇ, ಲೋಕಾಯುಕ್ತದವರಿಂದ ನಮಗೆ ವರದಿ ಬಂದ ಮೇಲೆ ಅದನ್ನು ನೋಡಿಕೊಂಡು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ. ಇನ್ನು ಮತ್ತೊಂದು ವಿಚಾರವೇನೆಂದರೆ ರೈತರ ಮರಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ಇಲಾಖೆಯವರಿಂದ ಅಲ್ಲಿ ಇಲ್ಲಿ ಕೇಳಿರುತ್ತಿರುವಂತಹ ವಿಚಾರವಾಗಿದೆ. ಆದುದರಿಂದ ಲೋಕಾಯುಕ್ತದವರಿಂದ ವರದಿ ಬಂದ ನಂತರ ಮುಂದಿನ ಕ್ರಮವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್.ಸಿ.ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ಸ್ವಾಧೀನ ಮಾಡಿಕೊಂಡಿರುವಂತಹ ಭೂಮಿಯಲ್ಲಿ ನಾಲೆ ಎಲ್ಲಿ ಹೋಗಿದೆ ಅಂತಹ ಕಡೆಗಳಲ್ಲಿ ರೈತರೇ ಮರಗಳನ್ನು ಅಥವಾ ಅವರಿಗೆ ಸೇರಿದಂತಹ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದರೆ, ಅದರಿಂದ ದುರುಪಯೋಗವಾಗಿದೆ ಎಂದು ಹೇಳುವಂಥಾದ್ದು ನಮ್ಮ ಉದ್ದೇಶವಲ್ಲ. ಆದರೆ, ರೈತರಿಗೆ ಸೇರಿದಂತಹ ಮರಗಳಾಗಲೀ ಅಥವಾ ಅವರಿಗೆ ಸೇರಿದಂತಹ ವಸ್ತುಗಳನ್ನು ಇಂಜಿನಿಯರ್‌ಗಳು ಏನಾದರೂ ಅಕ್ರಮವಾಗಿ ಮಾರಿಕೊಂಡು ಅದರಿಂದ ಬಂದಿರುವಂತಹ ಹಣವನ್ನು ದುರುಪಯೋಗ ಮಾಡಿಕೊಂಡಿದ್ದರೆ ದಯಮಾಡಿ ಅಂತಹ ಅಧಿಕಾರಿಗಳ ಮೇಲೆ ತಾವು ಉಗ್ರವಾದ ಕ್ರಮ ಕೈಗೊಳ್ಳಬೇಕೆಂದು ನನ್ನ ಮನವಿಯಾಗಿದೆ. ಏಕೆಂದರೆ ರೈತರಿಗೆ ಸೇರಿದಂಥಾದ್ದು ಅವರೇ ತೆಗೆದುಕೊಂಡು ಹೋಗಿದ್ದರೆ, I cannot say it is a misappropriation. ಆದರೆ, ರೈತರಿಗೆ ಸೇರಿದಂಥಾದ್ದನ್ನು ಇವರು ಏನಾದರೂ ಅಕ್ರಮವಾಗಿ ಮಾರಾಟ ಮಾಡಿಕೊಂಡಿದ್ದರೆ ದಯಮಾಡಿ ಅದರ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ

ತೆಗೆದುಕೊಳ್ಳಬೇಕೆಂದು ನಮ್ಮ ಉದ್ದೇಶವಾಗಿದೆ. ನನ್ನ ಅಭಿಪ್ರಾಯವೇನಾಗಿದೆ ಎಂದರೆ ರೈತರಿಗೆ ಸೇರಿದಂತಹ ಹಣದ ಬಗ್ಗೆ ದುರುಪಯೋಗವಾಗಿದೆ ಎನ್ನುವಂಥಾದ್ದು ಏನಿದೆ ಆ ಅಭಿಪ್ರಾಯ ಹೋಗಬೇಕೆಂದರೆ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಛೇರ್ಮನ್:- ಅವರ ವರದಿ ಬಂದ ಮೇಲೆ ಪರಿಶೀಲಿಸಿ ನೋಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಎಸ್.ಶಿವಣ್ಣ:- ಮಾನ್ಯ ಅಧ್ಯಕ್ಷರೇ, ಈಗ ಎರಡು ಕೋಟಿ ಚಿಲ್ಲರೆ ಹಣದ ಬಗ್ಗೆ ಏನು ಆಪಾದನೆ ಇದೆ. ಈ ವಿಚಾರದಲ್ಲಿ ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಅನೇಕ ಮರಗಳು ಈಗಲೂ ಸ್ವಾಧೀನ ಮಾಡಿಕೊಂಡಿರುವಂತಹ ಜಾಗದಲ್ಲಿ ಇದೆ. ಅಲ್ಲಿ ಅನೇಕ ತೆಂಗಿನ ಮರಗಳು, ಅಡಿಕೆ ಮರಗಳು, ರೈತರು ಬಿಟ್ಟುಕೊಂಡಿರುವಂಥಾದ್ದು ಇದೆ. ಈಗ ನಾನು ಕಬ್ಬಿಣ, ಸಿಮೆಂಟ್ ಮಿಸ್ಯಾಂಸ್ ಆಗಿರುವುದರ ಬಗ್ಗೆ ಮಾತನಾಡುವುದಕ್ಕೆ ತಯಾರಿಲ್ಲ. ಏಕೆಂದರೆ ನಾಳೆಯ ದಿವಸ ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಕಷ್ಟದ ಪರಿಸ್ಥಿತಿ ಕಾಣುತ್ತದೆ. ಆ ನಾಲೆಯ ಕೆಲಸದಲ್ಲಿ ಇಂಜಿನಿಯರ್‌ಗಳು ಏನೇನು ಮಾಡಿದ್ದಾರೆನ್ನುವುದು ನೋಡಿದರೆ ಅನೇಕ ರೈತರು ಜಾಗವನ್ನು ಬಿಡುವಂತಹ ಪರಿಸ್ಥಿತಿ ಇದೆ. ಈ ಮರಗಳನ್ನು ಬಿಟ್ಟರೆ ಜಾಗವನ್ನು ಬಿಡುತ್ತೇವೆನ್ನುವಂಥ ಘಟನೆ ನನ್ನ ಮುಂದೆ ನಡೆದಂಥಾದ್ದು ಆಗಿದೆ. ಈಗ ಲೋಕಾಯುಕ್ತದವರು ಹಾಕಿರುವಂಥಾದ್ದು ಇದು ಸತ್ಯ, ಅದು ಅಸತ್ಯವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ 60-70 ಜನರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದಾರೆ. ಅನೇಕ ರೈತರ ಹೆಂಡತಿ, ಮಕ್ಕಳುಗಳು ನನ್ನ ಹತ್ತಿರ ಬಂದು ಹೇಳಿದ್ದಾರೆ. ಲೋಕಾಯುಕ್ತದವರು ಏಕ್‌ದಂ ಬಂದು ನಮ್ಮ ಗಂಡಂದಿರನ್ನು ಅರೆಸ್ಟ್ ಮಾಡುವಂತಹ ಪರಿಸ್ಥಿತಿ ಇದ್ದರೆ ನಾವು ಎಲ್ಲಿ ತಲೆ ಮರೆಸಿಕೊಳ್ಳಬೇಕು, ಏನು ಮಾಡಬೇಕೆಂದು ಅವರು ನನ್ನ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಸರ್ಕಾರದ ವತಿಯಿಂದ ಇಂತಹ ಅಚಾತುರ್ಯ ಆಗಿದೆಯೋ ಅಥವಾ ಆಗಿಲ್ಲವೋ ಎನ್ನುವಂಥಾದ್ದನ್ನು ಪರಿಶೀಲಿಸುವಂಥಾದ್ದು ಆಗಬೇಕು. ಲೋಕಾಯುಕ್ತದವರು ಏನು ಮಾಡಿದ್ದಾರೆ, ಅದನ್ನು ಸತ್ಯವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ ನನ್ನ ವ್ಯಾಪ್ತಿಯಲ್ಲಿ ಬರುವಂತಹ ಅನೇಕ ಮರಗಳು ಹಾಗೆ ಇವೆ. ಆ ರೈತಾಪಿ ಜನರು ಬಿಟ್ಟುಕೊಂಡಿರುವಂತಹ ಮರಗಳು. ಆದುದರಿಂದ ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ನಿಜವಾದ ತಪ್ಪಿತಸ್ಥರ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಅನುವು ಮಾಡಿಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಏಕೆಂದರೆ, ಇವತ್ತು ಅನೇಕ ಜನ ಇಂಜಿನಿಯರ್‌ಗಳು ತಲೆ ಮರೆಸಿಕೊಂಡಿದ್ದಾರೆ. ಅದಕ್ಕೋಸ್ಕರ ಸರ್ಕಾರ ತತ್‌ಕ್ಷಣ ನೋಡಿ ಎಲ್ಲಿ ಲೋಕಾಯುಕ್ತದವರು ಕೇಸ್ ಹಾಕಿದ್ದಾರೆ. ಅದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಿ. ಅಲ್ಲಿಯವರೆಗೆ

ಎಂಜಿನಿಯರ್‌ಗಳು ಎಲ್ಲಿ ಓಡಾಡಬೇಕೋ ಅಲ್ಲಿ ಅವರು ಓಡಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ಈ ಗಲಾಟೆಯಲ್ಲಿ ನಮಗೆ ನಡೆಯಬೇಕಾದಂತಹ ಕೆಲಸವನ್ನು ನಿಲ್ಲಿಸಬೇಡಿ, ಏಕೆಂದರೆ ಇಂಜಿನಿಯರ್‌ಗಳು ಮತ್ತು ಲೋಕಾಯುಕ್ತದವರ ಘರ್ಷಣೆಯಲ್ಲಿ ಈಗ ಇದು ಸುಳ್ಳು ಕೇಸೋ ಅಥವಾ ಸರಿಯಾದಂತಹ ಕೇಸೊ? ನಮಗೆ ಗೊತ್ತಿಲ್ಲ. We are not concerned about that. The department will take its own course. But, now my request to the Hon'bel Minister is that because of this problem, work should not be stopped. ಅದಕ್ಕೋಸ್ಕರ ನನ್ನ ಕ್ಷೇತ್ರದಲ್ಲಿ ಈಗ ಕೆಲಸ ನಡೆಯುತ್ತಿದೆ. ದಯಮಾಡಿ ಅಲ್ಲಿ ಕೆಲಸ ನಿಲ್ಲದ ಹಾಗೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಶಿವಣ್ಣ:- ಮಾನ್ಯ ಅಧ್ಯಕ್ಷರೆ, ಈಗ ಅನೇಕ ಕೆರೆಗಳಲ್ಲಿ ನೀರು ತುಂಬುತ್ತಾ ಇದೆ. ಈ ಟೈಮ್‌ನಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ, ನಮ್ಮ ಕೆರೆಗಳು ಇಲ್ಲದ ಹಾಗೆ ಆಗುತ್ತದೆ. ಇನ್ನು ಎರಡು-ಮೂರು ತಿಂಗಳುಗಳಲ್ಲಿ ನೀರು ತುಂಬುವಂತಹ ಪರಿಸ್ಥಿತಿ ಇದೆ. ಅದಕ್ಕೋಸ್ಕರ ತಾವು ಸರ್ಕಾರಕ್ಕೆ ಏನು ಮಾರ್ಗದರ್ಶನ ಮಾಡಬೇಕೊ ಅದನ್ನು ಮಾಡಬೇಕಾಗುತ್ತದೆ. ಈಗ ಲೋಕಾಯುಕ್ತದವರು ಹಿಡಿಯುತ್ತೇವೆಂದು ಹೋದರೆ ಯಾವ ಇಂಜಿನಿಯರ್‌ಗಳು ಕೆಲಸವನ್ನು ಮಾಡುವುದಿಲ್ಲ. ಅಲ್ಲಿ ತಪ್ಪಿತಸ್ಥರು ಯಾರಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ, ಆದರೆ, ವ್ಯವಸ್ಥಿತವಾಗಿರುವಂಥಾದ್ದನ್ನು ನೋಡಿ ಕ್ರಮ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಹೇಮಾವತಿ ನಾಲೆಯ ಕೆಲಸದಲ್ಲಿ ಎರಡು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಅವ್ಯವಹಾರವಾಗಿದೆ ಎಂದು ಲೋಕಾಯುಕ್ತದವರು ವರದಿಕೊಟ್ಟಿರುವಂಥಾದ್ದು ನಿನ್ನೆ ಪೇಪರ್‌ನಲ್ಲಿ ಬಂತು. ಇವತ್ತು ಇಂಜಿನಿಯರ್ ಸಂಘದವರು ಒಂದು ಹೇಳಿಕೆಯನ್ನು ಕೊಟ್ಟಿರುವಂಥಾದ್ದು ಬಂದಿದೆ. ತಾವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಆರು ಸಾವಿರ ಎಕರೆಗೂ ಹೆಚ್ಚು ಜಮೀನು ಇವತ್ತು ಸ್ವಾಧೀನವಾಗಬೇಕು, ನಾಲೆ ಮಾಡುವುದಕ್ಕೋಸ್ಕರವೆಂದು ಹೇಳಿದ್ದೀರಿ. ಈಗಾಗಲೇ ಎರಡೂವರೆ ಸಾವಿರ ಚಿಲ್ಲರೆ ಎಕರೆಗಳು ಅಕ್ವೈರ್ ಆಗಿದೆ ಎಂದು ಹೇಳಿದ್ದೀರಿ. ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರುವಂಥಾದ್ದು ಏನೆಂದರೆ ನಾಲೆ ಮಾಡಬೇಕೆಂದರೆ ಲ್ಯಾಂಡ್ ಅಕ್ವೈರ್ ಮಾಡಬೇಕೆಂದರೆ ಪ್ರೊಸೀಡಿಂಗ್ ಡಿಲೇ ಆಗುತ್ತದೆಂದು ನಾಲ್ಕು ವರ್ಷಗಳ ಹಿಂದೆ ಒಂದು ತೀರ್ಮಾನ ಆಗಿದೆ. ಅದು ಏನೆಂದರೆ ಜಮೀನಿನ ಮಾಲೀಕರು ಏನು ಇರುತ್ತಾರೆ, ಅವರ ಮನಸ್ಸನ್ನು ಒಲಿಸಿ ಆ ಜಮೀನನ್ನು ಬಿಡಿಸಿಕೊಳ್ಳಬೇಕೆನ್ನುವಂತಹ ಒಂದು ಕಂಡೀಷನ್ ಹಾಕಿ ಈ ಕೆಲಸವನ್ನು

ಅಲ್ಲಿ ಮಾಡಿದರು. ಈಗಾಗಲೇ ನಾಲೆಯಾಗಿರುವಂತಹ ಪ್ರದೇಶಗಳನ್ನು ತೆಗೆದುಕೊಂಡರೆ ಎರಡು ಸಾವಿರಕ್ಕೂ ಹೆಚ್ಚು ಕಡಿಮೆ ಎಂದರೆ ಮೂರು ಸಾವಿರ ಎಕರೆಯವರೆಗೂ ಅಕ್ಯೂಫೈ ಆಗಿ ಕೆಲಸವೂ ಆಗಿ ಹೋಗಿದೆ. ಇನ್ನೂ ಕಾಂಪೆನ್ಸೇಶನ್ ಸೆಟಲ್ ಆಗಿಲ್ಲ. ಇವತ್ತು ವರ್ಕ್ ಆಗಿದೆ, ನಾಲೆಯೂ ಆಗಿದೆ, ಇದು ಕಂಟ್ರಾಕ್ಟ್‌ದಾರರಿಗೂ ಮತ್ತು ಮಾಲೀಕರಿಗಿರುವಂತಹ ಅಂಡರ್‌ಸ್ಟ್ಯಾಂಡಿಂಗ್ ಮೇಲೆ ಆಗಿರುವುದರಿಂದ ಮತ್ತು ಆ ಭಾಗದಲ್ಲಿರುವಂತಹ ಮರಗಳನ್ನು ರೈತರೇ ತೆಗೆದುಕೊಂಡು ಹೋಗಿರುವಂತಹ ಸಾಧ್ಯತೆಗಳು ಇವೆ. ಆದುದರಿಂದ, ಇದರಲ್ಲಿ ಅವ್ಯವಹಾರವಾಗಿದೆ ಎನ್ನುವಂಥಾದ್ದನ್ನು ನೀವು ವಿಮರ್ಶೆ ಮಾಡಬೇಕು. ಅದನ್ನು ಪರೀಕ್ಷೆ ಮಾಡಿಸಬೇಕು ಮತ್ತು ಪರಿಶೀಲನೆ ಮಾಡಿಸಬೇಕು. ಆದರೆ ಈಗಾಗಲೇ ಲೋಕಾಯುಕ್ತದವರ ವರದಿ ಪತ್ರಿಕೆಯಲ್ಲಿ ಏನು ಎಂಬುದು ಬಂದಿದೆ. ಅದಕ್ಕೆ ನಾವು ಗಮನಹರಿಸಬೇಕಾಗಿದೆ. ದಯಮಾಡಿ ಇದನ್ನು ನಿಷ್ಪಕ್ಷಪಾತವಾಗಿ ಮಾಡಿಸಿ, ವಸ್ತುಸ್ಥಿತಿ ಏನು ಇದೆ ಎನ್ನುವ ಬಗ್ಗೆ ಪ್ರಮಾಣಿಸಿ ನೋಡುವಂತಹ ಕೆಲಸವನ್ನು ಮಾಡಬೇಕು. ಈಗಾಗಲೇ ಮಾನ್ಯ ಸದಸ್ಯರು ಸಲಹೆ ಮಾಡುವಂತಹ ರೀತಿಯಲ್ಲಿ ಕೂಡ ಅಂದರೆ ಹಿಂದೆ ಸಿ.ಓ.ಡಿ. ಎನಕ್ವೈರಿ ಮಾಡಿಸಿದ್ದೀರಿ. ಆ ಸಿ.ಓ.ಡಿ ಎನ್‌ಕ್ವೈರಿ ಮಾಡಿಸಿ ಎಲ್ಲಾ ಕಡತಗಳನ್ನು ವಾಪಸ್ಸು ತೆಗೆದುಕೊಂಡಿರುವುದರಿಂದ ಆಗುವಂಥ ಕೆಲಸ 6-7 ತಿಂಗಳುಗಳು ನಿಂತು ಹೋಗಿದೆ. ಆದುದರಿಂದ ಆ ರೀತಿಯಾಗಿ ಕೆಲಸ ಆಗುವಂಥಾದ್ದಕ್ಕೆ ಧಕ್ಕೆಯಾಗಬಾರದೆಂದು ನನ್ನ ಮನವಿಯಾಗಿದೆ.

ಶ್ರೀ ಬಿ.ನಾಗರಾಜಯ್ಯ:- ಮಾನ್ಯ ಅಧ್ಯಕ್ಷರೆ, ಹೇಮಾವತಿ ನಾಲೆಯ ಕೆಲಸ ನಡೆಯುತ್ತಿರುವಂಥಾದ್ದು ನಿಜ, ಮಾನ್ಯ ಜಯಚಂದ್ರರವರು ಹೇಳಿದಂತಹ ರೀತಿಯಲ್ಲಿ ಇವತ್ತು ಮೂರು ಸಾವಿರ ಚಿಲ್ಲರೆ ಎಕರೆ ಪ್ರದೇಶದಷ್ಟು ಅಂದರೆ ಸುಮಾರು 187ಕಿ.ಮೀ.ರವರೆಗೆ ಕೆಲಸ ನಡೆಯುತ್ತಾ ಇದೆ. ಕೇವಲ ಎರಡು ಸಾವಿರ ಚಿಲ್ಲರೆ ಎಕರೆಗಳಿಗೆ ಮಾತ್ರ ಪರಿಹಾರ ನೀಡಿದ್ದೇವೆಂದು ಹೇಳಿರುವಂಥಾದ್ದು ಮತ್ತು ಅಲ್ಲಿ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಯಾವುದೇ ರೈತರು ಜಮೀನು ಬಿಟ್ಟು ಕೊಡುವುದಕ್ಕೆ ಮುಂದೆ ಬರುತ್ತಿಲ್ಲ ಇವತ್ತು ಗುತ್ತಿಗೆದಾರರು ಸಂಬಂಧಪಟ್ಟಂತಹ ರೈತರಿಗೆ ಅಲ್ಪ ಸ್ವಲ್ಪ ಹಣವನ್ನು ಕೊಟ್ಟು ನೀವು ಪರಿಹಾರದ ಹಣವನ್ನು ತೆಗೆದುಕೊಳ್ಳಿ. ಇದರ ಜೊತೆಗೆ ನಾವು ಸ್ವಲ್ಪ ಹಣವನ್ನು ಕೊಡುತ್ತೇವೆಂದು ಹೇಳಿ ರೈತರಿಂದ ಜಮೀನನ್ನು ಬಿಡಿಸಿಕೊಂಡು ಕೆಲಸ ಮಾಡಿರುತ್ತಾರೆ. ಮಧ್ಯೆ ಲೋಕಾಯುಕ್ತದವರಿಗೆ ಫೈಲ್ ಯಾವ ರೀತಿಯಲ್ಲಿ ರೆಫರ್ ಆಯಿತೊ ನನಗೆ ಗೊತ್ತಿಲ್ಲ. ಆದರೆ ಲೋಕಾಯುಕ್ತದವರು ಕೇಸನ್ನು ಇನ್‌ವೆಸ್ಟಿಗೇಷನ್ ಮಾಡಲಿ ಅಥವಾ ಕಾಮಗಾರಿಯಲ್ಲಿ ಏನಾದರೂ ಲೋಪದೋಷವಿದೆ ಎಂದರೆ ಅದಕ್ಕೆ ಸಂಬಂಧಪಟ್ಟಂತಹ ಎಂಜಿನಿಯರ್ ಮೇಲೆ ಕ್ರಮ ತೆಗೆದುಕೊಳ್ಳಲಿ. ಆದರೆ ರೈತರು ಬೆಳೆದಂತಹ ಎರಡು ಕೋಟಿ ಚಿಲ್ಲರೆ ರೂಪಾಯಿಗಳಿಗೆ ಸಂಬಂಧಪಟ್ಟಂತಹ ಮರಗಳನ್ನು ರೈತರೆ ತೆಗೆದುಕೊಂಡು ಹೋಗಿದ್ದಾರೆಯೇ ವಿನಃ ಅದನ್ನು ಯಾವುದೇ ಇಲಾಖೆಯ

ಅಧಿಕಾರಿಗಳು ಒಂದು ತುಂಡು ಮರವನ್ನು ತೆಗೆದುಕೊಂಡು ಹೋಗಿಲ್ಲ. ಅವರು ಒಂದು ತುಂಡು ಮರವನ್ನು ಮಾರದೇ ಇದ್ದು, ಕಾನೂನು ದೃಷ್ಟಿಯಲ್ಲಿ ರೈತ ಪರಿಹಾರವನ್ನು ತೆಗೆದುಕೊಂಡ ಮೇಲೆ ಆ ಮರಗಳು ಪಿ.ಡಬ್ಲ್ಯೂ.ಡಿ ಇಲಾಖೆಗೆ ಮತ್ತು ಸರ್ಕಾರಕ್ಕೆ ಸೇರಿದ್ದು ಎನ್ನುವುದನ್ನು ನಾವು ಒಪ್ಪುವುದಕ್ಕೆ ಸಿದ್ದರಿದ್ದೇವೆ. ಆದರೂ ಸಹ ರೈತ ಬೆಳೆದಂತಹ ಮರಗಳನ್ನು ರೈತರೇ ತೆಗೆದುಕೊಂಡು ಹೋದ ಸಂದರ್ಭದಲ್ಲಿ ರೈತನಿಗೆ ನೀವು ಜಮೀನು ಬಿಟ್ಟು ಕೊಡಿ ನಾವು ಹೆಚ್ಚಿಗೆ ಹಣವನ್ನು ಕೊಡುತ್ತೇವೆಂದು ಕಂಟ್ರಾಕ್ಟದಾರರು ತಮ್ಮ ಕಾಮಗಾರಿಗಳನ್ನು ಮಾಡಬೇಕೆಂಬ ಹಿನ್ನಲೆಯನ್ನು ಅವರು ಹೆಚ್ಚಿಗೆ ಹಣವನ್ನು ಕೊಟ್ಟು ಜಮೀನುಗಳನ್ನು ಬಿಡಿಸಿಕೊಂಡು ಕೆಲಸವನ್ನು ಮಾಡಿರುವಂತಹ ಸಂದರ್ಭದಲ್ಲಿ ರೈತರು ಅವರು ಮರಗಳನ್ನು ಕಡಿದುಕೊಂಡು ಹೋದಂಥಾದ್ದು ಆಗಿದೆ. ಆದರೆ ಇವತ್ತು ಲೋಕಾಯುಕ್ತದವರು ಏನು ಮಾಡುತ್ತಿದ್ದಾರೆಂದರೆ ಸಂಬಂಧಪಟ್ಟಂತಹ ಇಂಜಿನಿಯರ್‌ಗಳನ್ನು ಅರೆಸ್ಟ್ ಮಾಡಿ ಕ್ರಿಮಿನಲ್ ಕೇಸ್ ಹಾಕಿ ಅವರೆಲ್ಲರನ್ನು ಅರೆಸ್ಟ್ ಮಾಡುವುದಕ್ಕೆ ಹೊರಟಿದ್ದಾರೆ. ಈಗ ಕಾಮಗಾರಿಯನ್ನು ಮಾಡುತ್ತಿರುವಂತಹ ಪ್ರತಿಯೊಬ್ಬ ಇಂಜಿನಿಯರ್ ಸಹ ಅವರ ಪ್ರದೇಶಗಳನ್ನು ಬಿಟ್ಟು ತಲೆ ತಪ್ಪಿಸಿಕೊಂಡು ಓಡಾಡುವಂತಹ ವ್ಯವಸ್ಥೆಯಾಗಿದೆ. ಈಗ ರೈತರೇ ಮರಗಳನ್ನು ಕಡಿದುಕೊಂಡು ಹೋಗಿರುವಂಥಾದ್ದಕ್ಕೆ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂಥಾದ್ದು ಬೇಕಾಗಿಲ್ಲ. ಆದರೆ, ಅವರು ಮಾಡಿರುವಂತಹ ಕಾಮಗಾರಿಯಲ್ಲಿ ಏನಾದರೂ ಲೋಪ ದೋಷಗಳು ಇದ್ದರೆ ನೀರಾವರಿ ಇಲಾಖೆಯ ಇಂಜಿನಿಯರ್‌ಗಳ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವುದೇ ವಿಧವಾದ ಕ್ರಮವನ್ನು ತೆಗೆದುಕೊಳ್ಳಲಿ ಅಥವಾ ಲೋಕಾಯುಕ್ತದವರು ಯಾವುದೇ ರೀತಿಯಾದ ಕ್ರಮವನ್ನು ರೈತ ಬೆಳೆದಂತಹ ಮರಗಳನ್ನು ಅವನೇ ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ ಇಂಜಿನಿಯರ್‌ಗಳನ್ನು ಗುರಿ ಮಾಡಿ ಕೇಸ್ ಹಾಕುವಂಥಾದ್ದು ಸರಿಯಲ್ಲವೆಂದು ನಮ್ಮ ಮಾನ್ಯ ನೀರಾವರಿ ಮಂತ್ರಿಯವರು ಆಶ್ವಾಸನೆಯನ್ನು ಕೊಡದೆ ಹೋದರೆ ನಮ್ಮ ಮಾನ್ಯ ಜಯಚಂದ್ರರವರು ಹೇಳಿದ ರೀತಿಯಲ್ಲಿ ಅಲ್ಲಿ ಕಾಮಗಾರಿಗಳು ನಿಂತು ಹೋಗುತ್ತದೆ ಮತ್ತು ಕೆಲಸಗಳು ಹಾಳಾಗುವಂತಹ ಪರಿಸ್ಥಿತಿ ಬರುತ್ತದೆ. ಆ ಕಾರಣದಿಂದ ಆ ರೈತರು ಬೆಳೆದಂತಹ ಮರಗಳನ್ನು ಅವರೇ ಎರಡು ಕೋಟಿ ರೂಪಾಯಿಗಳ ದುಡ್ಡನ್ನು ತೆಗೆದುಕೊಂಡು ಹೋಗಿರುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಲೋಕಾಯುಕ್ತದವರು ಲೋಪದೋಷಗಳು ಏನಾದರೂ ಆಗಿದ್ದಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿ, ಆದರೆ ಮರಗಳನ್ನು ತೆಗೆದುಕೊಂಡಿದ್ದರ ಮೇಲೆ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೆನ್ನುವಂಥಾದ್ದನ್ನು ಹೇಳಿ ಅದನ್ನು ತಡೆ ಹಿಡಿಯುವಂಥಾದ್ದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ತಮ್ಮ ಮುಖಾಂತರ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರಾರಂಭದಲ್ಲೇ ಮಾನ್ಯ

ಮುದ್ದಹನುಮೇಗೌಡರವರು ಕೇಳಿದಂತಹ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೆ. ಲೋಕಾಯುಕ್ತದವರು ಈಗ ಎರಡು ಕಾಗದಗಳನ್ನು ಈ ತಿಂಗಳ 13ನೇ ತಾರೀಖು ಮತ್ತು 16ನೇ ತಾರೀಖು ಬರೆದು ಈ ನಾಲ್ಕು ಡಿವಿಜನ್‌ಗಳಲ್ಲಿ ಹೋಗುವಂತಹ ನಾಲ್ಕು ಕಿ.ಮೀ.ಗಳಲ್ಲಿ ಮರಗಳ ವ್ಯಾಲ್ಯೂ ಮಾಡಿ ಅದನ್ನು ಬಹಿರಂಗ ಹರಾಜು ಮಾಡಿ ಸರ್ಕಾರಕ್ಕೆ ಅದನ್ನು ಕಟ್ಟುವ ಬದಲಾಗಿ ಇವರೇ ಆ ಹಣವನ್ನು ತೆಗೆದುಕೊಂಡು ಉಪಯೋಗಿಸಿರಬಹುದೆಂಬ ಮಾಹಿತಿ ನಮಗೆ ದೊರೆತಿದೆ. ಆದ್ದರಿಂದ ವಿವರಗಳನ್ನು ಅವರು ನಮ್ಮ ಇಲಾಖೆಗೆ ಕೇಳಿದ್ದಾರೆ. ಈಗ ಶಿವಣ್ಣನವರು, ಜಯಚಂದ್ರರವರು ಮತ್ತು ನಮ್ಮ ನಾಗರಾಜರವರು ಆ ಮರಗಳನ್ನು ರೈತರೇ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು. ಅಲ್ಲಿ ಕೆಲವು ಮರಗಳು ಹಾಗೆಯೇ ಇವೆ, ಕೆಲಸ ಮಾಡತಕ್ಕಂಥ ಕಾಲದಲ್ಲಿ ಸಹಜವಾಗಿ ಕಂಟ್ರಾಕ್ಟರ್ ಅವರು ಹೇಳಿದ ಹಾಗೆ ಹೊಂದಾಣಿಕೆಯನ್ನು ಮಾಡಿಕೊಂಡು ಕೆಲಸ ವೇಗವಾಗಿ ನಡೆಯಲೆಂದು, ಅಕ್ವಿಸಿಷನ್ ತೊಂದರೆ ಬರುತ್ತದೆಂದು ಮಾಡಿದ್ದು ನಿಜ. ಆ ಹಿನ್ನೆಲೆಯಲ್ಲಿ ನಾವು ಲೋಕಾಯುಕ್ತಕ್ಕೆ ಮಾಹಿತಿಯನ್ನು ಕೊಡುವಾಗ, ಎಷ್ಟು ವಾಸ್ತವ ಮಾಹಿತಿ ಇದೆ, ಅದನ್ನು ನಾವು ನಾಲ್ಕು ಡಿವಿಷನ್‌ಗಳಿಂದ ತರಿಸಿಕೊಂಡು, ಎಲ್ಲಿ ನಾವು ಮರಗಳನ್ನು ಹರಾಜು ಮಾಡಿದ್ದೇವೆ, ಅಥವಾ ರೈತರು ಮರಗಳನ್ನು ತೆಗೆದುಕೊಂಡು ಹೋಗಿದ್ದಾರೆ, ಇದು 1989ರಿಂದ ನಡೆದಿರತಕ್ಕಂಥದ್ದು. ಅದಕ್ಕೆ ನಾನು ಈಗಾಗಲೇ ನಮ್ಮ ಕಾರ್ಯದರ್ಶಿ, ಚೀಫ್ ಇಂಜಿನಿಯರ್ ಅನ್ನು ಕರೆಸಿದ್ದೇನೆ. ಇವತ್ತು ಕುಳಿತುಕೊಂಡು ಸರಿಯಾದ ಮಾಹಿತಿ ಹಾಗೂ ಆ ಪ್ರದೇಶದಲ್ಲಿ ಮರಗಳ ಪರಿಸ್ಥಿತಿ ಏನಾಗಿದೆ ಎನ್ನುವ ವಾಸ್ತವಾಂಶವನ್ನು ನಾವು ಲೋಕಾಯುಕ್ತಕ್ಕೆ ಸಲ್ಲಿಸಿದರೆ, ಅವರು ಸರಿಯಾಗಿ ತನಿಖೆ ಮಾಡಿ ವರದಿ ಕೊಡುತ್ತಾರೆ. ಅವರಿಂದ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳೋಣ. ಮಾನ್ಯ ಸದಸ್ಯರಾದ ಜಯಚಂದ್ರರವರು ಮೂರುಸಾವಿರ ಎಕರೆಗಿಂತ ಹೆಚ್ಚು ಜಮೀನು ಸ್ವಾಧೀನವಾಗಿರಬಹುದೆಂದು ಹೇಳಿದರು, ನಿಜ, ಅದು ಆಗಿರಬಹುದು. ಇಲ್ಲಿ ನಮಗೆ ಅಧಿಕೃತ ದಾಖಲೆ ಪ್ರಕಾರ ಮಾತ್ರ ಅಷ್ಟು ಇರುತ್ತದೆ, ಇನ್ನು ಕೂಡ ಕರೆಸ್ಪಾಂಡೆನ್ಸ್‌ನಲ್ಲಿರುವುದರಿಂದ ಆರು ಸಾವಿರ ಎಕರೆಯಲ್ಲಿ ಮೂರು ಸಾವಿರ ಎಕರೆಗಿಂತ ಹೆಚ್ಚು ಹೋಗಿರಬಹುದು. ನಾವು ಅಧಿಕೃತವಾಗಿ ಎಷ್ಟು ಹ್ಯಾಂಡ್‌ಓವರ್ ಮಾಡಿಕೊಂಡಿದ್ದೇವೆ, ಅಧಿಕೃತವಾಗಿ ನಾವು ಎಷ್ಟು ಸ್ವಾಧೀನಪಡಿಸಿಕೊಂಡಿದ್ದೇವೆ ಆ ಮಾಹಿತಿಯನ್ನು ತಮಗೆ ಕೊಟ್ಟಿದ್ದೇವೆ. ಆದರೆ ಒಂದು ಮಾತು, ನಮ್ಮ ಇಂಜಿನಿಯರ್‌ಗಳು ತಪ್ಪು ಮಾಡದ ಮೇಲೆ ಹೆದರಿಕೊಂಡು ಓಡಬೇಕಾದಂಥ ಅವಶ್ಯಕತೆಯಿಲ್ಲ, ಆ ಮರವನ್ನು ಯಾರು ತೆಗೆದುಕೊಂಡು ಹೋಗಿದ್ದಾರೆಂದು ಮಾಹಿತಿಯನ್ನು ಒದಗಿಸಿಕೊಟ್ಟರೆ, ಲೋಕಾಯುಕ್ತದವರು ಫೈಂಡಿಂಗ್ಸ್ ಕೊಡಲಿ, ಅದು ಸರ್ಕಾರಕ್ಕೆ ಬರುತ್ತದೆ, ಇದುವರೆವಿಗೆ ಲೋಕಾಯುಕ್ತದವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿಲ್ಲ ಅವರು ಕೊಟ್ಟ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳುತ್ತೇನೆ. ಅಲ್ಲಿ ಕೆಲಸ ಯಾವುದೇ ಕಾರಣಕ್ಕೆ ನಿಲ್ಲುವುದಿಲ್ಲ. ಈ ಕೇಸ್ ಬಗ್ಗೆ ನಾನು ಏನು ಮಾತನಾಡುವುದಕ್ಕೆ ಹೋಗುವುದಿಲ್ಲ,

ಮಾತನಾಡುವುದಕ್ಕೆ ಸಾಧ್ಯವೂ ಇಲ್ಲ. ಈಗ ಲೋಕಾಯುಕ್ತದವರು ಫೈಂಡಿಂಗ್ಸ್ ಅನ್ನು ಎನ್‌ಕ್ವೈರಿ ಮಾಡುವಂಥ ಈ ಹಂತದಲ್ಲಿ ಮಾತನಾಡುವುದು ಬೇಡ. ಒಂದು ಮಾತನ್ನು ಹೇಳುತ್ತೇನೆ; ಅವರು ಹೆದರಿಕೊಂಡು ಹೋಗುವಂಥ ಅವಶ್ಯಕತೆ ಇಲ್ಲ. ಅವರು ಮಾಹಿತಿ ಕೊಡಲಿ, ನಿಜಾಂಶ ಕೊಡಲಿ, ಅವರಿಗೆ ಸರಿಯಾದ ವರದಿಯನ್ನು ಕೊಡುತ್ತೇವೆ, ಅದರ ಮೇಲೆ ಫೈಂಡಿಂಗ್ಸ್ ಕೊಡುತ್ತಾರೆ ಕೆಲಸ ನಿಲ್ಲುವುದಿಲ್ಲವೆಂದು ಹೇಳುತ್ತೇನೆ.

ಛೇರ್ಮನ್: ಸದಸ್ಯರ ಕಳಕಳಿ ಏನೆಂದರೆ, ಕೆಲಸ ನಿಲುಗಡೆಯಾಗಬಾರದು ಎನ್ನುವುದು ಒಂದು, ಎರಡನೆಯದು ಇಂಜಿನಿಯರ್ಸ್‌ಗಳಿಗೆ ಅಪಮಾನವಾಗುವಂಥ ಪರಿಸ್ಥಿತಿ ಬರಬಾರದು, ಆ ರೀತಿಯಲ್ಲಿ ವಿಚಾರಣೆಯಾಗಲಿ ಎನ್ನುವುದನ್ನು ಹೇಳುತ್ತಿದ್ದಾರೆ, ಅದಕ್ಕೆ ತಮ್ಮಿಂದ ಆಶ್ವಾಸನೆ ಬಂದರೆ ಸಾಕು.

ಶ್ರೀ.ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ನಿಜವಾಗಿ ಯಾರು ನಿಮ್ಮ ಇಂಜಿನಿಯರ್‌ಗಳು ಮಾರಿರುವುದಿಲ್ಲ ಆ ಇಂಜಿನಿಯರ್‌ಗೆ ರಕ್ಷಣೆ ಸಿಗುತ್ತದೆ, ಯಾವ ಇಂಜಿನಿಯರ್ ಮರಗಳನ್ನು ಮಾರಿರುತ್ತಾರೆ ಅವನಿಗೆ ನಮ್ಮಿಂದ ರಕ್ಷಣೆ ಸಿಗುವುದಿಲ್ಲ. ಆದುದರಿಂದ, ಕೆಲಸ ನಿಲ್ಲದೇ ಇರುವ ರೀತಿಯಲ್ಲಿ ನಾನು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಇದರ ಪರಿಣಾಮ ಏನಾಗಿದೆ ಎಂದರೆ, ಈ ವರದಿ ಪತ್ರಿಕೆಯಲ್ಲಿ ಬಂದ ತಕ್ಷಣ ಏನಾಗಿದೆ ಎಂದರೆ ನಾಲೆಯಲ್ಲಿ ಬರುವ ನೀರೇ ನಿಂತು ಹೋಗಿದೆ. ಕೆಲವು ಇಂಜಿನಿಯರ್ಸ್ ನಮ್ಮ ಮೇಲೆ ಬರುತ್ತದೊ ಏನೋ ಎನ್ನುವ ಕಾರಣಕೋಸ್ಕರ ನಾಲೆಯಲ್ಲಿ ನೀರು ಬಿಡುವುದೇ ನಿಂತು ಹೋಗಿದೆ. ಎಂಟು ನೂರು ಕ್ಯೂಸೆಕ್ಸ್ ನೀರು ಬರುತ್ತಿತ್ತು, ಒಂದು ಕಡೆ ಹೇಮಾವತಿ ತುಂಬಿ ಹರಿಯುತ್ತಿದೆ, ಆದರೆ ನೀರನ್ನೇ ಬಿಟ್ಟಿಲ್ಲ. ದಯವಿಟ್ಟು, ನಿರಂತರವಾಗಿ ನೀರನ್ನು ನಿಲ್ಲಿಸದ ಹಾಗೆ ಒಂದು ಸಾವಿರ ಕ್ಯೂಸೆಕ್ಸ್ ನೀರನ್ನುಬಿಡುತ್ತೀರಾ? ಏಕೆಂದರೆ, ಇವತ್ತು ನಮ್ಮ ಯಾವ ಜಲಾಶಯಗಳಲ್ಲೂ, ಕೆರೆಕುಂಟೆಗಳಲ್ಲೂ ನೀರು ತುಂಬಿಲ್ಲ, ನೀರು ಬಿಡದಿದ್ದರೆ, ನಾವೇ ಹೋಗಿ ನೀರನ್ನು ಬಿಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ.

ಶ್ರೀ ಎನ್.ಪಿ.ಮುದ್ದಹನುಮೇಗೌಡ: ಹೇಮಾವತಿಯಲ್ಲಿ ಏನು ಕಾಯಿಲೆ ಇರಲಿಲ್ಲ, ಏನೋ ಕಾಯಿಲೆ ಇದೆಯೋ ಅದನ್ನು ಬೇಗ ವಾಸಿ ಮಾಡಿ, ಕಾಮಗಾರಿಗಳು ಚೆನ್ನಾಗಿ ನಡೆಯಲಿ ನೀರು ಬರಲಿ ಅಷ್ಟೆ ನಾವು ಕೇಳಿಕೊಳ್ಳುವುದು.

ಶ್ರೀ ಕೆ.ಎನ್.ನಾಗೇಗೌಡ: ಜಯಚಂದ್ರರವರ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಏಕೆಂದರೆ, ಮೂವತ್ತು ವರ್ಷಗಳಿಂದ ನಾಲೆಯಲ್ಲಿ ನೀರೇ ಬರುವುದಿಲ್ಲವೆಂದು ಜನರು ಮಾತನಾಡಿದರು, ನಾಲೆಯೇ ನಿಲ್ಲುವುದಿಲ್ಲವೆಂದು ಜನ ಮಾತನಾಡಿದರು, ನೀರೇ ನಿಲ್ಲುವುದಿಲ್ಲವೆಂದು ಮಾತನಾಡಿದರು. ಮಾನ್ಯ

ಜಯಚಂದ್ರರವರೆ ನಾವು ಎಂಟುನೂರು ಕ್ಯೂಸೆಕ್ಸ್ ನೀರನ್ನು ಎಂಟನೂರು ಕಿ.ಮೀ.ಗೆ ಟಚ್ ಮಾಡಿದ್ದೇವೆ. ಈಗ ತುಮಕೂರು ಜಿಲ್ಲೆಯ ಎಲ್ಲಾ ಜನರು ನೂರಾರು ಕೆರೆಗಳಲ್ಲಿ ನೀರನ್ನು ತುಂಬಿಸಿಕೊಂಡು ಸಂತೋಷವಾಗಿದ್ದಾರೆ. ತಮ್ಮ ಆಸೆ ಏನೆಂದರೆ ಎಂಟುನೂರು ಕ್ಯೂಸೆಕ್ಸ್ ಇರುವುದನ್ನು ಸಾವಿರಕ್ಕೆ ಹೆಚ್ಚು ಮಾಡಿ ಎನ್ನುವುದಾಗಿದೆ. ಆದರೆ, ಹೇಮಾವತಿಯಿಂದ ಎಂಟುನೂರು ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಬಂದಿದ್ದಕ್ಕೆ ಕೆಲಸ ಮಾಡಿದ್ದಾರಪ್ಪ ಎಂದು ಪ್ರಶಂಸೆ ಮಾತನ್ನು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ: ನೋಡಿ, ಈ ವಿಷಯದಲ್ಲಿ ನಾವು ಸಂಪೂರ್ಣವಾಗಿ ದುಡಿದಿರತಕ್ಕಂಥ ಎಲ್ಲಾ ಇಂಜಿನಿಯರ್‌ಗಳ ಪರಿಶ್ರಮವನ್ನು ಕೂಡ ಶ್ಲಾಘನೆ ಮಾಡುತ್ತೇವೆ. ಆದರೆ ಇವತ್ತು ನೀರು ತುಂಬಿ ತಮಿಳುನಾಡಿಗೆ ಹೋಗುವಂಥ ಸಂದರ್ಭದಲ್ಲಿ ಇನ್ನೂ ಇನ್ನೂರು ಕ್ಯೂಸೆಕ್ಸ್ ನೀರನ್ನು ಹೆಚ್ಚಿಗೆ ಬಿಟ್ಟು ನಮ್ಮ ಕೆರೆಗಳಿಗೆ ನೀರನ್ನು ಕೊಡಿ ಎನ್ನುವುದಷ್ಟೆ ನನ್ನ ಬಿನ್ನಹ.

ಶ್ರೀ ಎಸ್.ಶಿವಣ್ಣ: ಅಧ್ಯಕ್ಷರೆ, ನಾವು ನಾಗೇಗೌಡರನ್ನು ಅಭಿನಂದಿಸುತ್ತೇವೆ, ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈಗ ನಮ್ಮ ರೈತಾಪಿ ಜನರು ನೂರು ನೂರೈವತ್ತು ಕೆರೆಗಳಿಗೆ ನೀರು ತುಂಬಬೇಕೆಂದಿದ್ದೇವೆ, ಇನ್ನೆರಡು ತಿಂಗಳಲ್ಲಿ ಇವು ತುಂಬಬೇಕು, ಆನಂತರ ತುಂಬುವುದಕ್ಕಾಗುವುದಿಲ್ಲ. ಈಗೇನು ಎಂಟುನೂರು ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೀರಿ ಇದರ ಜೊತೆಗೆ ಇನ್ನೂ ಇನ್ನೂರು ಐವತ್ತು ಕ್ಯೂಸೆಕ್ಸ್‌ನಷ್ಟು ನೀರನ್ನು ಜಾಸ್ತಿ ಬಿಟ್ಟರೆ ನಮ್ಮ ಭಾಗದಲ್ಲಿರುವ ರೈತಾಪಿ ಜನರಿಗೆ ಅನುಕೂಲವಾಗುತ್ತದೆಂದು ನಾವು ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇವೆ. ಅದು ಬಿಟ್ಟು ನಮ್ಮ ಇಂಜಿನಿಯರ್‌ಗಳ ಮುಷ್ಕರದಿಂದ ಏನಾದರೂ ಕೆಲಸ ನಿಂತುಬಿಟ್ಟರೆ, ನಾಳೆ ದಿವಸ ನಮ್ಮ ಮೇಲೆ ಕ್ರಿಮಿನಲ್ ಕೇಸ್ ಬರಬಹುದೆಂದು ಅವರಿಗೆ ಭಯವಾಗುತ್ತದೆ ನಾಳೆ ದಿವಸ ಗತಿಯೇನಾಗುತ್ತದೆನ್ನುವುದನ್ನು ನಾವು ಸರ್ಕಾರದ ಗಮನಕ್ಕೆ-ತರುತ್ತಿದ್ದೇವೆ.

ಶ್ರೀ ಎಸ್.ಪಿ.ಮುದ್ದಹನುಮೆಗೌಡ: ನಾನು ಅಭಿನಂದನೆ ಮಾಡಬೇಕಾದರೆ ನೂರ ಎಂಭತ್ತೇಳು ಕಿ.ಮೀ.ನಮ್ಮ ಕುಣಿಗಲ್ ಕೆರೆಗೆ ದಯಮಾಡಿ ತಾವು ನೀರನ್ನು ತಂದುಕೊಡಬೇಕು, ಆಮೇಲೆ ಮಾತ್ರ ಅಭಿನಂದನೆ ಮಾಡುತ್ತೇನೆ, ಈಗ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ಈಗ ಎಂಟುನೂರು ಕ್ಯೂಸೆಕ್ಸ್‌ನಿಂದ ಸಾವಿರ ಕ್ಯೂಸೆಕ್ಸ್ ಮಾಡತಕ್ಕಂಥದ್ದು ಇರಿಗೇಷನ್ ಕನ್ಸಲ್ಟೆಟೀವ್ ಕಮಿಟಿಯೊಳಗಡೆ ಮೀಟಿಂಗ್ ಮಾಡಿ ಡಿಮ್ಯಾಂಡ್ಸ್ ನೋಡಿಕೊಂಡು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಆ ಶಿಫಾರಸ್ಸು ಬಂದರೆ ನೋಡೋಣ.

ಶ್ರೀ ಟಿ.ಬಿ.ಜಯಚಂದ್ರ: ದಯಮಾಡಿ, ಕಮ್ಯಾಂಡ್ ಏರಿಯ ತುಮಕೂರು ಜಿಲ್ಲೆಗೆ

ನೀರನ್ನು ಕೊಡಲೇಬೇಕು, ಅದನ್ನು ಇರಿಗೇಷನ್ ಕಮಿಟಿಗೆ ಏತಕ್ಕೆ ತೆಗೆದುಕೊಂಡು ಹೋಗಬೇಕು? ಅದು ಇರಿಗೇಷನ್ ಕಮಿಟಿಯ ವ್ಯಾಪ್ತಿಗೆ ಬರುವುದಿಲ್ಲ, ಅದಕ್ಕಾಗಿ ದಯಮಾಡಿ ಆ ರೀತಿ ತಪ್ಪು ದಾರಿಗೆ ತೆಗೆದುಕೊಂಡು ಹೋಗಬೇಡಿ. ನೀರು ಹೆಚ್ಚಿಗೆ ಇದೆ, ನೀರನ್ನು ಹೆಚ್ಚಿಗೆ ಕೊಡುತ್ತೇವೆಂದು ಹೇಳುವುದಕ್ಕೆ ಏನು ತೊಂದರೆ?

ಶ್ರೀ. ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, 1160 ಕ್ಯೂಸೆಕ್ಸ್ ಎಂದು ಸ್ಪಷ್ಟವಾಗಿದೆ. ನಾಗಮಂಗಲಕ್ಕೆ 300 ಕ್ಯೂಸೆಕ್ಸ್, ಎಂಟು ನೂರು ಕ್ಯೂಸೆಕ್ಸ್ ಇಲ್ಲಿದೆ. ಅವರು ಸಾವಿರ ಕ್ಯೂಸೆಕ್ಸ್ ನೀರು ಕೊಡಿ ಎಂದು ಹೇಳಿದರು, ಹೇಮಾವತಿಯಲ್ಲಿ ನೀರು ಇದ್ದಾಗ ನೀರನ್ನು ಹೆಚ್ಚಿಗೆ ಕೊಡಿ ಎಂದು ಕೇಳುವುದರಲ್ಲಿ ತಪ್ಪೇನಿಲ್ಲ, ಆದರೆ ಕಾನೂನಿಗೆ ಅನುಗುಣವಾಗುವ ರೀತಿಯಲ್ಲಿ ನಾನು ಸಹಾಯ ಮಾಡಲು ಪ್ರಯತ್ನ ಮಾಡೋಣ.

ಶ್ರೀ ಡಿ.ನಾಗರಾಜಯ್ಯ: ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು, ಲೋಕಾಯುಕ್ತ ಅಧಿಕಾರಿಗಳು, ಅವರೆ ದುರಪಯೋಗ ಮಾಡಿರತಕ್ಕಂಥ ವರದಿಯನ್ನು ಸಲ್ಲಿಸಿದ ನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಕಾಮಗಾರಿ ವಿಚಾರದಲ್ಲಿ ಯಾವುದೇ ಲೋಪದೋಷಗಳಿದ್ದರೆ ಅವರು ಯಾವ ಅಧಿಕಾರಿಗಳ ಮೇಲಾದರೂ ಕ್ರಮ ತೆಗೆದುಕೊಂಡರೆ ನಮ್ಮದೇನು ತಂಟೆತಕರಾರು ಇಲ್ಲ. ರೈತ ತೆಗೆದುಕೊಂಡು ಹೋಗಿರುವ ಮರಗಳನ್ನು ಇಲಾಖೆಯ ಅಧಿಕಾರಿಗಳು ತೆಗೆದುಕೊಂಡು ಹೋಗಿದ್ದಾರೆ ಎನ್ನುವ ವಿಚಾರದಲ್ಲಿ, ಇವತ್ತು ಕೆಲವು ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಾರೆನ್ನುವ ವಿಚಾರದಲ್ಲಿ ಲೋಕಾಯುಕ್ತದವರು ಓಡಾಡಿಸುತ್ತಿದ್ದಾರೆ, ಇವತ್ತು ಅವರು ತಲೆಮರೆಸಿಕೊಳ್ಳುತ್ತಿದ್ದಾರೆ. ಮರದ ವಿಚಾರದಲ್ಲಿ ಸರ್ಕಾರಕ್ಕೆ ಸಂಪೂರ್ಣವಾದ ವರದಿಯನ್ನು ಸಲ್ಲಿಸಿ ಸರ್ಕಾರ ಆದೇಶ ಮಾಡುವವರೆಗೆ ಲೋಕಾಯುಕ್ತ ಅಧಿಕಾರಿಗಳು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ತೊಂದರೆ ಕೊಡದ ರೀತಿಯಲ್ಲಿ ಸಚಿವರು ಆಶ್ವಾಸನೆಯನ್ನು ಕೊಟ್ಟಿಲ್ಲ, ಅವರು ವೇಗ್ ಆಗಿ ಉತ್ತರವನ್ನು ಕೊಡುತ್ತಿದ್ದಾರೆ. ಎರಡನೆಯದು, ಹೇಮಾವತಿ ನೀರಿನಲ್ಲಿ ನನ್ನ ಕ್ಷೇತ್ರದಲ್ಲಿ ಮಾರಕೋನಹಳ್ಳಿ ಡ್ಯಾಂ ಎಂಬುದಿದೆ, ಆ ಡ್ಯಾಂನಲ್ಲಿ ಸುಮಾರು ಇಪ್ಪತ್ತೈದು ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿರತಕ್ಕಂಥದ್ದು, ಅಲ್ಲಿ ಎಲ್ಲರೂ ನಾಟಿ ಮಾಡಿದ್ದಾರೆ. ಈಗ ಹಾಲಿ ಇರುವ ಡ್ಯಾಂನಿಂದ ಕೇವಲ ಹದಿನೈದು ದಿವಸ ನೀರು ಬರುತ್ತದೆ. ಇವತ್ತು ಹೇಮಾವತಿ ನಾಲೆಯಿಂದ ಎಸ್ಕೇಪ್ ಮುಖಾಂತರ ಆ ಡ್ಯಾಂಗೆ ನೀರನ್ನು ಇವತ್ತು ಬಿಟ್ಟರು ಕೂಡ ಮೇಲ್ಗಡೆ ಇರುವ ಕೆರೆಗಳೆಲ್ಲಾ ತುಂಬಿ ಡ್ಯಾಂಗೆ ನೀರು ಹರಿದುಕೊಂಡು ಬರಬೇಕಾದರೆ ನಲವತ್ತೊಂದು ದಿವಸಗಳು ಬೇಕಾಗುತ್ತದೆ. ಈ ಸಮಯದವರೆವಿಗೂ ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಂಡರೂ ಕೂಡ ಎಸ್ಕೇಪ್ ಮುಖಾಂತರ ನೀರನ್ನು ಬಿಟ್ಟಿಲ್ಲ. ಎಸ್ಕೇಪ್ ಮುಖಾಂತರ ನೀರನ್ನು ಬಿಡುವುದರ ಮೂಲಕ ಹೇಮಾವತಿ ಡ್ಯಾಂಗೆ ನೀರನ್ನು ತುಂಬಿಸದೆ ಹೋದರೆ ಇಪ್ಪತ್ತೈದು ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ನಾಟಿ ಮಾಡಿರತಕ್ಕಂಥ ಬೆಳೆ ಹಾಳಾಗುತ್ತದೆ, ಇದರಿಂದ ರೈತರಿಗೆ

ತೊಂದರೆಯಾಗುತ್ತದೆ. ಸಚಿವರು ನೀರನ್ನು ಎಸ್ಕೇಪ್ ಮುಖಾಂತರ ಕೊಡುತ್ತೇವೆಂದು ಆಶ್ವಾಸನೆ ಕೊಡುವುದರ ಜೊತೆಗೆ ಕೂಡಲೇ ನೀರನ್ನು ಬಿಡಿಸಿಕೊಡಬೇಕಾಗಿ ಸಚಿವರಲ್ಲಿ ನಾನು ತಮ್ಮ ಮುಖಾಂತರ ಕೋರಿ ಕೊಳ್ಳುತ್ತಿದ್ದೇನೆ.

ಛೇರ್ಮನ್: ಅದು ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಅವರು ಹೇಳಿದ್ದನೆಲ್ಲಾ ಪರಿಶೀಲನೆ ಮಾಡುತ್ತೇನೆ.

ಶ್ರೀ ಡಿ.ನಾಗರಾಜಯ್ಯ: ಮಂತ್ರಿಗಳೆ, ಎಸ್ಕೇಪ್ ಮುಖಾಂತರ ನೀರನ್ನು ಬಿಟ್ಟಿಲ್ಲ. ಎಸ್ಕೇಪ್ ಮುಖಾಂತರ ನೀರನ್ನು ಬಿಡದೇ ಹೋದರೆ, ಎಸ್ಕೇಪ್ ಮುಖಾಂತರ ನೀರನ್ನು ಬಿಟ್ಟರು ಕೂಡ ಆ ಡ್ಯಾಂಗೆ ನೀರು ತಲುಪಬೇಕಾದರೆ ನಲವತ್ತೊಂದು ದಿವಸಗಳು ಬೇಕಾಗುತ್ತದೆ.

ಛೇರ್ಮನ್: ಈಗ ಮಂತ್ರಿಗಳು ಆಶ್ವಾಸನೆ ಕೊಟ್ಟು ತಾವು ಹೇಳಿದ್ದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ಈಗ ತಾವು ಎತ್ತಿರತಕ್ಕಂಥ ಪ್ರಶ್ನೆಗಳನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ, ಇದರ ಬಗ್ಗೆ ಚರ್ಚೆ ಸಾಕು; ತಾವು ಹೇಳಿದ್ದನ್ನೆಲ್ಲಾ ಪರಿಶೀಲನೆ ಮಾಡುತ್ತಾರೆ. ಶ್ರೀ ಪುಟ್ಟಣ್ಣಯ್ಯನವರೇ, ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚಿಸಲು ತಮ್ಮನ್ನು ಕರೆಯುತ್ತಿದ್ದೇನೆ.

(7) ನಿಯಮ 69ರ ಮೇರೆಗೆ ಚರ್ಚೆ

ವಿಷಯ: 1997-98ನೇ ಸಾಲಿನ ಕಬ್ಬಿಗೆ ಬೆಲೆಯ ನಿಗದಿ ಹಾಗೂ 1996-97ರಲ್ಲಿ ಡಿಸ್ಟಿಲರಿ ಮತ್ತು ನಾನ್ ಡಿಸ್ಟಿಲರಿ ಎಂದು ಕಾರ್ಖಾನೆಗಳನ್ನು ವಿಭಾಗ ಮಾಡಿರುವುದರಿಂದ ರೈತರಿಗಾಗಿರುವ ನಷ್ಟ

+ ಶ್ರೀ. ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಸಭಾಧ್ಯಕ್ಷರೆ, ಸಾರ್ವಜನಿಕವಾಗಿ ರೈತರ ಮಹತ್ವವಾದ ವಿಚಾರವನ್ನು ನಿಯಮ 69ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಉಮೇಶ್ ಕತ್ತಿ, ಸಕ್ಕರೆ ಮಂತ್ರಿಯವರು ಇಲ್ಲೇ ಕುಳಿತಿದ್ದಾರೆ, ಅವರು ಕತ್ತಿ ತೆಗೆದುಕೊಂಡು ಈ ಕಾರ್ಖಾನೆಯಲ್ಲಿ ಯಾರ್ಯಾರು ರೈತರಿಗೆ ಮೋಸ ಮಾಡಿದ್ದಾರೆ ಅವರಿಗೆ ಹೊಡೆಯಿರಿ ಎಂದರೆ, ಯಾವಾಗಲೂ ಕತ್ತಿ ತೆಗೆದುಕೊಂಡು ರೈತರಿಗೇ ಹೊಡೆಯುತ್ತಾ ಬಂದಿದ್ದಾರೆ. ಮೊದಲನೆಯದಾಗಿ ರೈತರಿಗೆ ಎಷ್ಟು ಬಾಕಿ ಕೊಡಬೇಕೆನ್ನುವುದನ್ನು ಚರ್ಚೆ ಮಾಡೋಣ. ಒಟ್ಟು ಹದಿನೇಳು ಸಕ್ಕರೆ ಕಾರ್ಖಾನೆಗಳು, ಸಾರ್ವಜನಿಕವಾಗಿ ಎರಡು ಕಾರ್ಖಾನೆಗಳು, ಸಂಯುಕ್ತ ರಂಗಗಳಲ್ಲಿ ಎರಡು ಕಾರ್ಖಾನೆಗಳು, ಖಾಸಗಿ ಕಾರ್ಖಾನೆಗಳು ಒಂಭತ್ತು. ಈಗ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಭದ್ರಾ ಕಾರ್ಖಾನೆಯಲ್ಲಿ ಬರಬೇಕಾಗಿರುವ ಬಾಕಿ